ಕಾರ್ಯಕಾರಿಣಿ ಸಭೆ

ಹುಬ್ಬಳ್ಳಿ: ಆರವಿಂದ ನಗರ ಜಿಲ್ಲಾ ಬಿಜೆಪಿ ಪಕ್ಷದ ಕಚೇರಿಯಲ್ಲಿ ಇಂದು ಹುಬ್ಬಳ್ಳಿ ಧಾರವಾಡ ಪಶ್ಚಿಮ 74.ವಿಧಾನಸಭಾ ಕ್ಷೇತ್ರದ ಕಾರ್ಯಕಾರಿಣಿ ಸಭೆ ನಡೆಸಲಾಯಿತು.

ಈ ಕಾರ್ಯಕ್ರಮ ದಲ್ಲಿ ಎಸ್‌ಐಆರ್ ಹಾಗೂ ಮಂಡಳದ ಕಾರ್ಯಕರ್ತರಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ಸಭೆ ಅಧ್ಯಕ್ಷತೆ ಮಂಡಳದ ಮಂಜುನಾಥ ಮಲ್ಲಿಗವಾಡ ವಹಿಸಿದ್ದರು. ಈ ಸಂದರ್ಭದಲ್ಲಿ ಶಾಸಕ ಅರವಿಂದ ಬೆಲ್ಲದ, ಹುಬ್ಬಳ್ಳಿ- ಧಾರವಾಡ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಗರಗ, ಶಿವಣ್ಣ ಬಡವನವರ ಹುಬ್ಬಳ್ಳಿ ಧಾರವಾಡ ಮೇಯರ್ ಜ್ಯೋತಿ ಪಾಟೀಲ, ಮಹಾನಗರ ಪಾಲಿಕೆಯ ಸದಸ್ಯರಾದ ಶಿವು ಹಿರೇಮಠ, ರಾಮನ ಬಡಿಗೇರ, ಸತೀಶ ಹಾನಗಲ ಚಂದ್ರಕಲಾ ಕೊಟ್ಟಬಾಗಿ ನೀಲವ್ವ ಅರವಾಳದ ಆನಂದ ಯಾವಗಲ, ಮಂಜುನಾಥ ಭಟ್ಟನವರ, ವಿಷ್ಣು ಕೊಲ್ಲಳ್ಳಿ, ಅರವಾಳದ ಹಾಗೂ ಪ್ರಧಾನ ಕಾರ್ಯದರ್ಶಿಯಾದ ಅಶೋಕ ವಾಲಿಕರ, ರಮೇಶ ದೊಡವಾಡ, ಪ್ರಮುಖರಾದ ಹಾಗೂ ಎಲ್ಲಾ ಮೋರ್ಚಾ ಅಧ್ಯಕ್ಷರುಗಳು ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮೋರ್ಚಾ ಪದಾಧಿಕಾರಿಗಳು ಎಲ್ಲರೂ ಉಪಸ್ಥಿತರಿದ್ದರು. ಪ್ರಮುಖ ಮುಖಂಡರು ಪಾಲ್ಗೊಂಡಿದ್ದರು.

ಚಾಲುಕ್ಯ ನಗರ ಜನರ ಬೇಡಿಕೆ ಈಡೇರಿಕೆ

ಉದಯಕಾಲ ನ್ಯೂಸ್

ಧಾರವಾಡ: ತಮ್ಮ ನಗರಕ್ಕೆ ಬಾಸ್ ಸೌಕರ್ಯ ಕಲ್ಪಿಸಿ ಕೊಡುವಂತೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾರು ಕ್ರಮ ತೆಗೆದುಕೊಂಡಿರಲಿಲ್ಲ. ಇತ್ತ ಇಳುಕಿ ನೋಡಿರಲಿಲ್ಲ. ಬಸ್ ಸೌಕರ್ಯ ಇಲ್ಲದೆ ವಿದ್ಯಾರ್ಥಿಗಳು ನಾಗರಿಕರು ಬಹಳ ತೊಂದರೆ ಕೊಡುತ್ತಿದ್ದರು. ಈ ನಗರಕ್ಕೆ ಸರಿಯಾದ ಸಂಪರ್ಕ ಸೇತುವೆಗಳಿಲ್ಲ ಎಂಬುದು ಇಲ್ಲನ ಜನರ ಗೋಳಾಗಿತ್ತು.

ಈ ಕುರಿತು ಕಾಂಗ್ರೆಸ್ ಮುಖಂಡ ದೀಪಕ್ ಚಿಂಚೋರೆ ಮುಂದೆ ಅಳಲು ತೋಡಿಕೊಂಡ ಚಾಲುಕ್ಯ ನಗರದ ಸಾರ್ವಜನಿಕರಿಗೆ ಪ್ರದೇಶಕ್ಕೆ ಭೇಟಿ ನೀಡಿ ಸರ್ಕಾರಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಲ್ಲದೇ ಬಸ್ ಸೌಕರ್ಯ ಒದಗಿಸಿಕೊಡುವಲ್ಲಿ ಶ್ರಮಿಸಿದ್ದಾರೆ.

ಧಾರವಾಡದ ಕೆಲಗೇರಿ ಹಿಂಭಾಗದಲ್ಲಿರುವ ಚಾಲುಕ್ಯ ನಗರಕ್ಕೆ ಬಸ್ ಸೌಕರ್ಯ ಕಲ್ಪಿಸುವಂತೆ ಅಲ್ಲಿನ ಜನ ಅಧಿಕಾರಿಗಳಿಗೆ ವಿನಂತಿಸಿದ್ದರೂ ಅಧಿಕಾರಿಗಳು ಮಾತ್ರ ಬಸ್ ಸೌಕರ್ಯ ನೀಡಿರಲಿಲ್ಲ. ಇದೇ ವಿಷಯವನ್ನು ಚಾಲುಕ್ಯನಗರದ ನಿವಾಸಿಗಳು ಕಾಂಗ್ರೆಸ್‌ನ ಹಿರಿಯ ಮುಖಂಡ ದೀಪಕ ಚಿಂಚೋರೆ ಅವರಿಗೆ ತಿಳಿಸಿದಾಗ ಚಿಂಚೋರೆ ವಾಯವ್ಯ ಸಾರಿಗೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಚಾಲುಕ್ಯನಗರಕ್ಕೆ ಬಸ್ ವ್ಯವಸ್ಥೆ ಮಾಡಿಸಿದ್ದಾರೆ.

ಈ ಬಸ್ ವ್ಯವಸ್ಥೆ ಆದ ಮೇಲೆ ಶಾಸಕ ಅರವಿಂದ ಬೆಲ್ಲದ ಅವರು ಆ ಬಸ್ ತಾವೇ ಉದ್ಘಾಟಿಸುವುದಾಗಿ ಹೇಳಿದ್ದರಂತೆ. ಅಧಿಕಾರಿಗಳು ಆ ಬಸ್‌ಗೆ ಆತ್ಮಶ್ರೀ ನಗರದ ಬಸ್ ಎಂದು ಬೋರ್ಡ್ ಕೂಡ ಹಾಕಿಸಿದ್ದರು. ಆದರೆ, ದೀಪಕ ಚಿಂಚೋರೆ ಅವರು ಸೋಮವಾರ ಆ ಬಸ್‌ಗೆ ತಾವೇ ಚಾಲನೆ ನೀಡಿ ಅದರಲ್ಲಿ ಚಾಲುಕ್ಯನಗರದವರೆಗೂ ಪ್ರಯಾಣ ಮಾಡಿ ಆ ಬಸ್‌ಗೆ ಚಾಲುಕ್ಯನಗರದ ಬಸ್ ಎಂದೇ ಬೋರ್ಡ್ ಹಾಕಿಸಿದ್ದಾರೆ. ಚಿಂಚೋರೆ ಅವರ ಈ ಕಾರ್ಯಕ್ಕೆ ಕೆಲಗೇರಿಯ ಚಾಲುಕ್ಯ ನಗರ ನಿವಾಸಿಗಳು ಧನ್ಯವಾದ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳು ಶಿಸ್ತು, ನೈತಿಕ ಮೌಲ್ಯ ಬೆಳಸಿಕೊಳ್ಳಲಿ

ಉದಯಕಾಲ ನ್ಯೂಸ್

ನವಲಗುಂದ: ಶೈಕ್ಷಣಿಕ ಸಾಧನೆಯೊಂದಿಗೆ ವಿದ್ಯಾರ್ಥಿಗಳು ಶಿಸ್ತು ಸಂಯಮ ಹಾಗೂ ಕೌಶಲ್ಯ ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳುವಂತೆ ಶ್ರೀ ಜಗದ್ಗುರು ಜಾತ ನಾಗಲಿಂಗಸ್ವಾಮಿ ಮಠದ ಶ್ರೀ ವೀರೇಂದ್ರ ಸ್ವಾಮೀಜಿ ವಿದ್ಯಾರ್ಥಿಗಳಿಗೆ ಕರೆನೀಡಿದರು.

ಸ್ಥಳೀಯ ಶ್ರೀ ಜಗದ್ಗುರು ಜಾತ ನಾಗಲಿಂಗ ಮಹಾಸ್ವಾಮಿ ವಿದ್ಯಾಪೀಠದಲ್ಲಿ ನಡೆದಲ್ಲಿ ಭಾನುವಾರ ಜರುಗಿದ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು

ಉಪನ್ಯಾಸಕ ನಿರ್ಮಲ ಬಟ್ಟಲ್ ಮಾತನಾಡಿ ಇಂದು ಮೌಲ್ಯವರ್ಧಿತ ಶಿಕ್ಷಣ ಅವಶ್ಯಕ ಎಂದರು. ಇದೆ ವೇಳೆ ಪಿಯುಸಿ ಮತ್ತು ಎಸ್ ಎಸ್ ಎಲ್ ಸಿ 75 ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ 12 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆರ್ ಜಿ ಪಂಡಿತ, ಕಾಳಪ್ಪ ಬಡಿಗೇರ, ವಿ.ಕೆ.ಪೋತದಾರ, ಸುನಿಲ್ ಆರ್ಕಸಾಲಿ ಇದ್ದರು. ಸಂಸ್ಥೆ ಕಾರ್ಯಾಧ್ಯಕ್ಷ ಸಿದ್ದಯ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು, ಮುಖ್ಯೋಪಾಧ್ಯಾಯ ಎಲ್. ಎಚ್. ಕಮ್ಮಾರ ನಿರೂಪಣೆ, ಭೀಮರಾಶಿ ಹೂಗಾರ ವಂದಿಸಿದರು.

ಚುಟುಕು ಪರಿಣಾಮಕಾರಿ ವಿಶಿಷ್ಟ ಸಾಹಿತ್ಯ : ರಮೇಶ್ ಮಹಾದೇವಪ್ಪ

ಉದಯಕಾಲ ನ್ಯೂಸ್

ಧಾರವಾಡ: ನಗರದ ರಂಗಾಯಣ ಸಭಾಂಗಣದಲ್ಲಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ 8ನೇ ಸಮ್ಮೇಳನವು ವಿಜೃಂಭಣೆಯಿಂದ ಜರುಗಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಮೇಶ್ ಮಹಾದೇವಪ್ಪನವರು ದೀಪ ಬೆಳಗಿಸಿ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಸಾಹಿತ್ಯವು ಸಮಾಜದ ಮೌಲ್ಯಗಳನ್ನು ಉಳಿಸಿ ಬೆಳೆಸುವ ಶಕ್ತಿಯಾಗಿದ್ದು, ಚುಟುಕು ಸಾಹಿತ್ಯವು ಕಡಿಮೆ ಪದಗಳಲ್ಲಿ ಪರಿಣಾಮಕಾರಿ ಸಂದೇಶ ನೀಡುವ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸಾಹಿತ್ಯ, ಸಮಾಜಸೇವೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಡಾ. ರಮೇಶ್ ಮಹಾದೇವಪ್ಪನವರಿಗೆ ಚುಟುಕು ಚೇತನ ಗೌರವ ಪ್ರಶಸ್ತಿ ಪ್ರದಾನ ಮಾಡಿ ಆತ್ಮೀಯವಾಗಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಚಾಲಕರಾದ ಶ್ರೀ ಕೃಷ್ಣಮೂರ್ತಿ ಕುಲಕರ್ಣಿ, ಶ್ರೀ ಚನ್ನಬಸಪ್ಪ ಧಾರವಾಡ ಶೆಟ್ರು, ಎಸ್.ಐ. ನೇಕಾರ, ಶ್ರೀ ಶಂಕರ್ ಕುಂಬಿ, ಶ್ರೀಮತಿ ವಂದನಾ ರಮೇಶ್ ಸೇರಿದಂತೆ ಅನೇಕ ಗಣ್ಯರು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು. ಸಮ್ಮೇಳನವು ಸಾಹಿತ್ಯ ಪ್ರೇಮಿಗಳ ಸಮ್ಮುಖದಲ್ಲಿ ಯಶಸ್ವಿಯಾಗಿ ನೆರವೇರಿತು.

ಬ್ರಾಹ್ಮಣ ಸಮಾಜ ವಿರುದ್ಧ ನಿರಾಧಾರ ಆರೋಪ

ಮುಸ್ಲಿಂ ಮುಖಂಡನ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ರಾಜ್ಯಪಾಲರಿಗೆ ಮನವಿ

ಉದಯಕಾಲ ನ್ಯೂಸ್

ಕುಂದಗೋಳ: ಗೋಮಾಂಸ ರಫ್ತು ವ್ಯವಹಾರದಲ್ಲಿ ಬ್ರಾಹ್ಮಣ ಸಮಾಜದವರು ತೊಡಗಿಸಿಕೊಂಡಿದ್ದಾರೆ ಎಂದು ಇತ್ತೀಚೆಗೆ ನಡೆದ ಪ್ರತಿಭಟನಾ ಸಭೆಯಲ್ಲಿ ನಿರಾಧಾರವಾಗಿ ಆರೋಪಿಸಿರುವ ಮುಸ್ಲಿಂ ಮುಖಂಡ ಹಜರತ್ ಅಲಿ ಜೋಡಮನಿ ವಿರುದ್ಧ ತಕ್ಷಣವೇ ಕಾನೂನು ಕ್ರಮ ಜರುಗಿಸಬೇಕು ಎಂದು ಪಟ್ಟಣದ ಬ್ರಾಹ್ಮಣ ಸಂಘದ ಅಧ್ಯಕ್ಷ ಹಾಗೂ ಸರ್ವ ಸದಸ್ಯರು ಸೋಮವಾರ ತಹಶೀಲ್ದಾರ್ ರಾಜು ಮಾವರಕರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಮನವಿಯಲ್ಲಿ ಅವರು ಸಮಾಜದ ಬೇಷರತ್ ಕ್ಷಮಾಪಣೆ ಕೇಳಬೇಕು, ಇತ್ತೀಚೆಗೆ ಕುಂದಗೋಳ ಪಟ್ಟಣದಲ್ಲಿ ಅಂಜುಮನ್ ಎ-ಇಸ್ಲಾಂ ಸಮಿತಿಯ ಸದಸ್ಯರು ಹಾಗೂ ತಾಲ್ಲೂಕಿನ ಮುಸ್ಲಿಂ ಬಾಂಧವರು ಸೇರಿ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಮತ್ತು ಗೋಮಾತೆಯನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಬೇಕೆಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿದ್ದರು.

ಮುಸ್ಲಿಂ ಬಾಂಧವರ ಈ ಮಹತ್ವದ ಬೇಡಿಕೆ ಮತ್ತು ಪ್ರತಿಭಟನೆಯು ಸ್ವಾಗತಾರ್ಹವಾಗಿದ್ದರೂ, ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಮುಸ್ಲಿಂ ಮುಖಂಡ ಬ್ರಾಹ್ಮಣ ಸಮುದಾಯದ ಮೇಲೆ ಇಲ್ಲಸಲ್ಲದ ಮತ್ತು ಆಧಾರರಹಿತವಾದ ಗಂಭೀರ ಆರೋಪಗಳನ್ನು ಮಾಡಿ ಸಮಾಜದ ಶಾಂತಿ ಕದಡಲು ಯತ್ನಿಸಿದ್ದಾರೆ,ಬ್ರಾಹ್ಮಣ ಸಮಾಜದವರು ಗೋಮಾಂಸ ರಫ್ತು ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ ಎನ್ನುವುದಕ್ಕೆ ಅವರ ಬಳಿ ಏನಾದರೂ ಸೂಕ್ತ ದಾಖಲೆಗಳಿದ್ದರೆ, ಅವರು ತಕ್ಷಣವೇ ಅದನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿ ಸಾಬೀತುಪಡಿಸಬೇಕು. ಒಂದು ವೇಳೆ ಅವರ ಬಳಿ ಯಾವುದೇ ದಾಖಲೆಗಳಿಲ್ಲದೆ ಕೇವಲ ಸುಳ್ಳು ಆರೋಪ ಮಾಡಿದ್ದರೆ, ತಮ್ಮ ನಿರಾಧಾರ, ಬೇಷರತ್ ಕ್ಷಮಾಪಣೆಯನ್ನು ಕೇಳಬೇಕು ಎಂದು ವಿವರಿಸಿದ್ದಾರೆ.



ಪ್ರತಿಭಟನೆಯಲ್ಲಿ ರಾಜ್ಯ ಬ್ರಾಹ್ಮಣ ಸಮಾಜದ ಉಪಾಧ್ಯಕ್ಷ ಲಕ್ಷ್ಮಣ ಸಿ ಕುಲಕರ್ಣಿ, ರಮೇಶ್ ಕುಲಕರ್ಣಿ, ಮೋಹನ್ ನಾಡಿಗೇರ, ಹರ್ಷ ಭಟ್ ಜೋಶಿ, ಟಿ ಕೆ ಕುಲಕರ್ಣಿ, ಆರ್ ಎಸ್ ಸಪ್ರೆ, ಶಾಮಸುಂದರ ದೇಸಾಯಿ, ಪ್ರಕಾಶ್ ನಾಡಗೀರ, ನರಸಿಂಹ ಭಟ್ಟ ಜೋಶಿ, ರಂಗನಗೌಡ ಪಾಟೀಲ್, ಕೇದಾರ್ ದೇಸಾಯಿ, ಸುನಿಲ್ ಕರೋಗಲ್, ಕಿರಣ ಹೊರತಿ, ಸತೀಶ್ ದೇಸಾಯಿ, ವಿನಾಯಕ್ ಕುಲಕರ್ಣಿ, ಪವನ್ ಪ್ರಸಾದ್ ಪಾಳಂದಿ,ಗಿರೀಶ್ ಪಾಟೀಲ್, ಕೃಷ್ಣ ಕುಲಕರ್ಣಿ, ಶಂಕರ್ ಅಗ್ನಿಹೋತ್ರಿ, ಗಜಾನನ ನಾಡಿಗೇರ, ಅಪ್ಪಣ್ಣ ಪಾಟೀಲ್ ಸೇರಿದಂತೆ ಅನೇಕರು ಇದ್ದರು.

ಚಥುರ್ಮಾಸ: ಮುನಿಶ್ರೀ ಮಹಾರಾಜರ ಆಗಮನ

ಉದಯಕಾಲ ನ್ಯೂಸ್

ನವಲಗುಂದ: ಚಥುರ್ಮಾಸ ನಿಮಿತ್ತ ಬೆಂಗಳೂರಿಂದ ವೀರಸಾಗರ ಜೀ ಮಹಾರಾಜ್, ವಿಶಾಲಸಾಗರ್ ಜಿ ಮಹಾರಾಜ್, ಧವಲಸಾಗರ ಜಿತ್ ಮಹಾರಾಜ, ಮಂಥನ್ ಸಾಗರ್ ಜಿ ಮಹಾರಾಜ್, ಮನನ್ಸಾಗರ್ ಜಿ ಮಹಾರಾಜ್, ವಿರಳಸಾಗರ ಜೀ ಮಹಾರಾಜ್, ಐಲಕ್ ಅನುಕರು ಸಾಗರ್ ಜಿ ಮಹಾರಾಜ್, ಕ್ಷುಲ್ಲಕಶ್ರೀ ವಿಜಿತ್‌ಸಾಗರ್ ಜೀ ಅವರ ಮಹಾರಾಜರ ಶುಭ ಆಗಮನ ನಡೆಯಿತು.

ಈ ವೇಳೆ ಜೈನ್ ಸಮಾಜದ ಮುಖಂಡರಾದ, ವಿ.ಪಿ. ಪಾಟೀಲ, ಬಿ.ಡಿ. ಪಾಟೀಲ, ಸಂತೋಷ ಪಾಟೀಲ, ಬಿಪಿನ ಪಾಟೀಲ, ಶಾಂತು ಪಾಟೀಲ, ತ್ರಿಸುಲಾ ಪಾಟೀಲ, ಸುಜಾತಾ ಪಾಟೀಲ, ಸುವರ್ಣ ಪಾಟೀಲ,ಲಲಿತಾ ಪಾಟೀಲ ಸೇರಿ ನೂರಾರು ಜನರಿದ್ದರು.

ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ) ನಿಯಮ 8-(1)

ಕೆಳಗೆ ಸಹಿ ಮಾಡಿರುವವರು IIFL ಹೋಮ್ ಫೈನಾನ್ಸ್ ಲಿಮಿಟೆಡ್ (ಹಿಂದೆ ಇಂಡಿಯಾ ಇನ್ಫೋಲೈನ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (IIFL- HFL) ನ ಅಧಿಕೃತ ಅಧಿಕಾರಿಯಾಗಿದ್ದು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 3 ರೊಂದಿಗೆ ಸೆಕ್ಷನ್ 13(12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೆಳಸಹಿ ಅಧಿಕೃತ ಅಧಿಕಾರಿಯು ಕೆಳಗೆ ಉಲ್ಲೇಖಿಸಲಾದ ಸಾಲಗಾರ/ಸಹ-ಸಾಲಗಾರರಿಗೆ ಮೊತ್ತವನ್ನು ಮರುಪಾವತಿಸಲು ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಿದ್ದರು. ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಿದ ಆಸ್ತಿಯನ್ನು **ಸ್ವಾಧೀನಪಡಿಸಿಕೊಂಡಿದ್ದಾರೆ** ಎಂದು ಸಾಲಗಾರ ಮತ್ತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ನಿರ್ದಿಷ್ಟಪಡಿಸಿದ ಸಾಲಗಾರ ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರಗಳು IIFL ನ ಶುಲ್ಕಕ್ಕೆ ಒಳಪಟ್ಟಿರುತ್ತವೆ. ಇಲ್ಲಿ ಉಲ್ಲೇಖಿಸಲಾದ ಮೊತ್ತಕ್ಕೆ ಬಡ್ಡಿಯೊಂದಿಗೆ HFL ಸಾಲಗಾರರ ಗಮನವನ್ನು ಕಾಯಿದೆಯ ಸೆಕ್ಷನ್ 13 ರ ಉಪ-ವಿಭಾಗ (8) ರ ನಿಬಂಧನೆಗಳಿಗೆ ಆಹ್ವಾನಿಸಲಾಗಿದೆ, ಸಾಲಗಾರರು "IIFL- HFL" ನ ಪಾಕಗಳನ್ನು ಎಲ್ಲಾ ವೆಚ್ಚಗಳು, ಶುಲ್ಕಗಳು ಮತ್ತು ಉಂಟಾದ ವೆಚ್ಚಗಳೊಂದಿಗೆ ಪಾವತಿಸಿದೆ, ಮಾರಾಟ ಅಥವಾ ವರ್ಗಾವಣೆಗೆ ನಿಗದಿಪಡಿಸಿದ ದಿನಾಂಕದ ಮೊದಲು ಯಾವುದೇ ಸಮಯದಲ್ಲಿ ಸುರಕ್ಷಿತ ಸ್ವತ್ತುಗಳನ್ನು "IIFL HFL" ಮಾರಾಟ ಮಾಡುವುದಿಲ್ಲ ಅಥವಾ ವರ್ಗಾಯಿಸುವುದಿಲ್ಲ ಮತ್ತು ಸುರಕ್ಷಿತ ಸ್ವತ್ತುಗಳ ವರ್ಗಾವಣೆ ಅಥವಾ ಮಾರಾಟಕ್ಕಾಗಿ "IIFL HFL" ಯಾವುದೇ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ.

ಸಾಲಗಾರ(ರು)/ ಸಹ-ಸಾಲಗಾರ(ರು) ಹೆಸರು	ಭದ್ರತೆ ಆಸ್ತಿ (ಸ್ಥಿರ ಆಸ್ತಿ) ವಿವರಣೆ	ಒಟ್ಟು ಬಾಕಿಗಳು (ರೂ.)	ಡಿಮ್ಯಾಂಡ್ ನೋಟಿಸ್ ದಿನಾಂಕ	ಸ್ವಾಧೀನಪಡಿಸಿಕೊಂಡ ದಿನಾಂಕ
ಶ್ರೀ ಎಚ್ ಸಲೀಂ ಶ್ರೀಮತಿ ಎಚ್ ಅಬಿದಾಲಿ ಶ್ರೀಮತಿ ಹುಸ್ನಾ ಬಾನು ಪ್ಯಾಕ್ಟೆಟ್ ಸಂಖ್ಯೆ 949473	ಕರ್ನಾಟಕ, ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು, ಅರೆಸೀಕೆರೆ ಹೋಬಳಿಯ ಶಿರಗಿಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿರುವ ಆಸ್ತಿ ಸಂಖ್ಯೆ 462, 152/2/0403000/200/483 ರ ಎಲ್ಲಾ ಭಾಗಗಳು - 5830.57 ವಿಸ್ತೀರ್ಣ (ಚದರ ಅಡಿಗಳಲ್ಲಿ) ಆಸ್ತಿ ಪ್ರಕಾರ: ಫ್ಲಾಟ್, ವಿಸ್ತೀರ್ಣ, ನಿರ್ಮಿತ, ವಿಸ್ತೀರ್ಣ, ಕಾರ್ಪೆಟ್ ಪ್ರದೇಶ ಆಸ್ತಿ ವಿಸ್ತೀರ್ಣ: 416.00, 550.00, 450.00 ಗಡಿ: ಉತ್ತರ ರಸ್ತೆ ದಕ್ಷಿಣ: ಒಳಚರಂಡಿ ಪ್ರದೇಶ: ನಂದಮೂರಿಮೂರ್ ಮನೆ ನಂ ಪಶ್ಚಿಮ: ಪಕ್ಕೆರಿ ಚಿದ್ರಪ್ಪ ಮನೆ	ರೂ.526958.04/-(ಎಂದು ಲಕ್ಷದ ಇಪ್ಪತ್ತಾರು ಸಾವಿರದ ಒಂಬತ್ತು ನೂರ ಎಪತ್ತೆಂಟು ಮತ್ತು ನಾಲ್ಕು ಪೈಸೆ ಮಾತ್ರ)	07/10/2025	11/06/2026

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು **ಶಾಖಾ ಕಚೇರಿಯ** ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಿ #CTS ಸಂಖ್ಯೆ.163/5D, "ಕಲಬುರ್ಗಿ ಲ್ಯಾಂಡ್ ಮಾರ್ಕ್ ಕಟ್ಟಡ", 1 ನೇ ಮಹಡಿ, ಕಲ್ಯಾಣಪುರ್ ನೋಗ್ ಹೋಂ ಪಕ್ಕದಲ್ಲಿ ದೇವಿನಾಂಡೆ ನಗರ, ಹುಬ್ಬಳ್ಳಿ-580029 ಅಥವಾ **ಕಾರ್ಪೊರೇಟ್ ಕಚೇರಿ:** IIFL ಟವರ್, ಪ್ಲಾಟ್ ಸಂಖ್ಯೆ 98, ಅಲ್ಮೋನ್ ವಿಹಾರ್, Ph-IV ಗುರ್ಗಾಂವ್, ಹರಿಯಾಣ.

ಸ್ಥಳ: ಬಳ್ಳಾರಿ ದಿನಾಂಕ: 16.06.2026 ಸಹಿ/- ಅಧಿಕೃತ ಅಧಿಕಾರಿ, IIFL ಹೋಮ್ ಫೈನಾನ್ಸ್ ಲಿಮಿಟೆಡ್‌ಗಾಗಿ.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದಾಗಿದೆ) CIN: L65110TN2014PLC097792, ನೋಂದಾಯಿತ ಕಚೇರಿ : ಕೆಆರ್‌ಎಂ ಟವರ್, 8 ನೇ ಮಹಡಿ ಹ್ಯಾರಿಂಗ್ಟನ್ ರಸ್ತೆ, ಚೆಟ್‌ಪೆಟ್, ಚೆನ್ನೈ-600031. ದೂ: + 9144 4564 4000 ಫ್ಯಾಕ್ಸ್ : +91 444564 4022

ಸೆಕ್ಷನ್ 13 (2) ರ ಸೆಕ್ಯುರಿಟೈಸೇಶನ್ ಮತ್ತು